# ✳ ಸ್ವಾಮಿ ಭೂತೇಶಾನಂದಜಿ : ಕೆಲವು ರೋಚಕ ಪ್ರಸಂಗಗಳು ✳


ಎನ್. ಪ್ರಭಾಕರ

ರಾಮಕೃಷ್ಣ ಮಠ ಮತ್ತು ಮಿಷನ್ನಿನ ಹನ್ನೆರಡನೆಯ ಪರಮಾಧ್ಯಕ್ಷರಾಗಿದ್ದ ಪರಮಪೂಜ್ಯ ಸ್ವಾಮಿ ಭೂತೇಶಾನಂದಜಿಯವರ ಅಸಾಧಾರಣ ಸರಳತೆ ಹಾಗೂ ನಿರಾಡಂಬರ ವ್ಯಕ್ತಿತ್ವವನ್ನು ಸೆರೆಹಿಡಿಯುವ ಕೆಲವು ಘಟನೆಗಳನ್ನು ಬೆಂಗಳೂರಿನ ನಿವಾಸಿಗಳಾದ ಲೇಖಕರು ಸಂಗ್ರಹಿಸಿದ್ದಾರೆ. ಅನೇಕ ಭಕ್ತರಿಗೆ ಮಂತ್ರದೀಕ್ಷೆಯನ್ನಿತ್ತು ಮಾರ್ಗದರ್ಶನ ನೀಡಿದ ಪೂಜ್ಯರು ಬೆಂಗಳೂರು, ಮೈಸೂರುಗಳಿಗೆ ಅನೇಕ ಬಾರಿ ಭೇಟಿಯಿತ್ತಿದ್ದರು. ಮೈಸೂರಿನ ಆಶ್ರಮದಲ್ಲಿದ್ದ Study Circle ವೇದಾಂತಾಧ್ಯಯನ ಕೇಂದ್ರದಲ್ಲಿ ಪೂಜ್ಯರು ವಿದ್ಯಾರ್ಥಿಯಾಗಿದ್ದು ಇತರ ವಿದ್ಯಾರ್ಥಿಗಳಿಗೆ ಪಾಠವನ್ನೂ ಹೇಳುತ್ತಿದ್ದ ಮೇಧಾವಿಗಳಾಗಿದ್ದರು.

ಅಸಾಧಾರಣ ಪಾಂಡಿತ್ಯ ಮತ್ತು ಸೋಗಿಲ್ಲದ ಪರಿಶುದ್ಧ ವಿನಯಶೀಲತೆಗಳು ಸ್ವಾಮಿ ಭೂತೇಶಾನಂದಜೀಯವರ ವ್ಯಕ್ತಿತ್ವದ ಅವಿಭಾಜ್ಯ ಅಂಗಗಳಾಗಿದ್ದವು. ಅವರ ನಿಸ್ಪೃಹ ಸರಳ ಜೀವನವನ್ನು ನೋಡಿದರೆ, ಅವರ ಪ್ರಕಾಂಡ ಬುದ್ಧಿಮತ್ತೆಯ ಆಳ ಅರಿಯುವುದು ಕಷ್ಟವಾಗುತ್ತಿತ್ತು. ರಾಜ್‌ಕೋಟ್‌ನಲ್ಲಿ ನಡೆದ ಒಂದು ಘಟನೆ ಅವರ ಪ್ರಚಂಡ ಪಾಂಡಿತ್ಯವನ್ನು ಎತ್ತಿತೋರಿಸುತ್ತದೆ. ರಾಜ್‌ಕೋಟ್‌ನ ಸುಪ್ರಸಿದ್ಧ ಸಂಸ್ಥೆಯೊಂದು ಒಮ್ಮೆ ಒಬ್ಬ ಪ್ರೊಫೆಸರ್‌ರನ್ನು ವೇದಾಂತದ ಬಗ್ಗೆ ಮಾತನಾಡಲು ಆಹ್ವಾನಿಸಿತು. ಸ್ವಾಮಿ ಭೂತೇಶಾನಂದರನ್ನು ಸಭೆಯ ಅಧ್ಯಕ್ಷರಾಗುವಂತೆ ಆಹ್ವಾನಿಸಲಾಗಿತ್ತು. ಮೊದಲು ಅವರು ಒಪ್ಪಿರಲಿಲ್ಲ. ಆದರೆ ಸಂಸ್ಥೆಯ ಕಾರ್ಯನಿರ್ವಾಹಕರ ಒತ್ತಡದಿಂದ ಕಡೆಗೆ ಒಪ್ಪಿಕೊಂಡರು. ಪ್ರೊಫೆಸರ್‌ನ ಉಪನ್ಯಾಸವು ಆಕ್ರಮಣಕಾರಿಯಾಗಿತ್ತು. ಆತ ವೇದಾಂತವನ್ನು ಸಲ್ಲದ ಮಾತುಗಳಲ್ಲಿ ಖಂಡಿಸಿ, ಅದು ಹೇಗೆ ಮಾರ್ಗತಪ್ಪಿಸುವ ದರ್ಶನಶಾಸ್ತ್ರವಾಗಿದೆ ಎಂದು ತೋರಿಸಲು ತನ್ನೆಲ್ಲ ವಾದಗಳಿಂದ ಪ್ರಯತ್ನಪಟ್ಟ. ಇದರಿಂದ ನೆರೆದಿದ್ದ ಭಕ್ತರೂ, ಶ್ರೋತೃಗಳೂ ಅತ್ಯಂತ ಬೇಸರಗೊಂಡರು. ವಿಶೇಷವಾಗಿ ಆಹ್ವಾನಿತರಾಗಿದ್ದ ಪ್ರೊಫೆಸರ್‌ನನ್ನು ಸೌಜನ್ಯದ ದೃಷ್ಟಿಯಿಂದ ಯಾರೂ ಖಂಡಿಸಲಿಲ್ಲ. ಎಲ್ಲರೂ ಸಭಾಧ್ಯಕ್ಷರು ಪರಿಹಾರವಾಗಿ ಏನಾದರೂ ಮಾತನಾಡುವರೆಂದು ಎದುರು ನೋಡುತ್ತಿದ್ದರು. ಭೂತೇಶಾನಂದಜಿ ತಮ್ಮ ಅಧ್ಯಕ್ಷ ಭಾಷಣದಲ್ಲಿ ಆ ಪ್ರೊಫೆಸರ್‌ನ ಆ ವಾದಗಳನ್ನು ಒಂದೊಂದಾಗಿ ತೆಗೆದುಕೊಂಡು ಅವು ಹೇಗೆ ಅಶಾಸ್ತ್ರೀಯ, ಕುತರ್ಕ, ವಿತಂಡವಾದಗಳೆಂದು ಹಂತಹಂತವಾಗಿ ತೋರಿಸಿದರು. ಅವರ ಶಾಸ್ತ್ರಪ್ರೌಢಿಮೆ, ತರ್ಕವಿನ್ಯಾಸ, ಸೂಕ್ಷ್ಮತೆ, ಸರಳವಾದರೂ ಶಕ್ತಿಯುತವಾದ ವಿಚಾರಮಂಡನೆ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಅವರ ವಾಕ್ಚಾತುರ್ಯವು ಪ್ರೊಫೆಸರನ್ನು ಮೌನವಾಗಿಸಿತಲ್ಲದೆ ಅವನು ತನ್ನ ವಾದಪುಷ್ಟಿಗಾಗಿ ಮತ್ತೇನನ್ನೂ ಹೇಳಲು ಸಮರ್ಥನಾಗಿರಲಿಲ್ಲ. ಕೆಲಕಾಲದ ನಂತರ ಈ ಪ್ರೊಫೆಸರ್ ವಿವಾದಕ್ಕೊಳಗಾದ 'ದೈವೀಪುರುಷ' ಆಚಾರ್ಯ ರಜನೀಶ್ ಎಂದು ಪ್ರಸಿದ್ಧರಾಗಿ ಇಲ್ಲಿಯೂ ವಿದೇಶಗಳಲ್ಲಿಯೂ ಹೆಸರು ಮಾಡಿದರು.



ಸ್ವಾಮಿ ಭೂತೇಶಾನಂದಜಿ ತೀರ್ಥಯಾತ್ರೆಗಳಿಗೆ ಹೋಗುವುದನ್ನು ಬಹಳ ಇಷ್ಟಪಡುತ್ತಿದ್ದರು. ೧೯೭೭ರಲ್ಲಿ ನೇಪಾಳದ ಪಶುಪತಿನಾಥ ಹಾಗೂ ಕಾಶ್ಮೀರದ ಅಮರನಾಥ ಯಾತ್ರೆಗಳನ್ನು ಕೈಗೊಂಡು ಕೊಲ್ಕತಾಗೆ ಹಿಂತಿರುಗಿ ಬೇಲೂರು ಮಠವನ್ನು ತಲುಪಿದಾಗ, ಅವರಿಗೆ ಪ್ರಣಾಮ ಸಲ್ಲಿಸಲು ನೆರೆದಿದ್ದ ಸಾಧುಗಳಲ್ಲಿ ಅಮರನಾಥ ಯಾತ್ರೆ ಕೈಗೊಂಡಿದ್ದ ಸಾಧುಗಳೊಬ್ಬರಿದ್ದರು. ಅವರೂ ಆ ದಿನವೇ ಮಠಕ್ಕೆ ವಾಪಸಾಗಿದ್ದರು. ಭೂತೇಶಾನಂದಜಿ ಆ ಸಾಧುವನ್ನು ಕೇಳಿದರು, "ಅಮರನಾಥದಲ್ಲಿ ನಿಮಗೆ ಏನಾದರೂ ಅನುಭವವಾಯಿತೆ?" ಮುಜಗರಗೊಂಡ ಆ ಸಾಧುಗಳು ಮೃದುವಾಗಿ "ಅಂಥದ್ದೇನೂ ಇಲ್ಲ, ಮಹಾರಾಜ್" ಎಂದುತ್ತರವಿತ್ತರು. ಆಗ ಇತರ ಸಾಧುಗಳು ಕುತೂಹಲದಿಂದ ಭೂತೇಶಾನಂದಜಿಯನ್ನು ಕುರಿತು "ನಿಮಗೇನಾದರೂ ಅನುಭವವಾಯಿತೆ?" ಎಂದು ಕೇಳಿದರು. ಭೂತೇಶಾನಂದಜಿ ತೋರಿಕೆಯ ಗಂಭೀರ ಭಾವದಿಂದ 'ಹೌದು! ನನಗೂ ಒಂದು ಅನುಭವವಾಯಿತು. ಸ್ವಾಮಿ ವಿವೇಕಾನಂದರಿಗೆ ಅತ್ಯುನ್ನತ ಸಮಾಧಿಯ ಅನುಭವವಾಗಿದ್ದುದನ್ನು ನೀವೆಲ್ಲ ಬಲ್ಲಿರಿ. ಅವರಿಗೆ ಸ್ವಯಂ ಅಮರನಾಥನ ದರ್ಶನವಾಗಿತ್ತು. ನನಗೂ ಹೃದಯದಲ್ಲಿ



ಒಂದು ಅನುಭವವಾಯಿತು. ಹೃದಯಾಘಾತದ ಅನುಭವ!" ಇದು ನಗೆಯ ಅಲೆಗಳನ್ನೆಬ್ಬಿಸಿತು. ಭೂತೇಶಾನಂದಜಿ ಬೇಲೂರು ಮಠದಲ್ಲಿದ್ದಾಗಲೆಲ್ಲ ಅವರನ್ನು ಸಂನ್ಯಾಸಿಗಳು ಮತ್ತು ಬ್ರಹ್ಮಚಾರಿಗಳು ಸುತ್ತುವರೆದು ಈ ರೀತಿಯ ಆನಂದದ ವಾತಾವರಣ ಉಂಟಾಗುತ್ತಿತ್ತು. ಪೂಜ್ಯರ ಹಾಸ್ಯಪ್ರಜ್ಞೆ ಹಾಗೂ ಕೂಡಲೇ ಹೊರಹೊಮ್ಮುತ್ತಿದ್ದ ಚತುರೋಕ್ತಿಗಳೇ ಇದಕ್ಕೆ ಪ್ರೋಷಣೆಯನ್ನು ನೀಡುತ್ತಿದ್ದವು.

ಬಂಗಾಳಿ ಭಾಷೆಯ 'ಉದ್ಬೋಧನ' ಪತ್ರಿಕೆಯ ಜುಲೈ ೧೯೫೮ರ ಸಂಚಿಕೆಯಲ್ಲಿ 'ಗುರುಕಲ್ಪನೆ' ಎಂಬ ವಿಷಯವನ್ನು ಕುರಿತ ಪೂಜ್ಯರ ಲೇಖನವೊಂದು ಪ್ರಕಟವಾಗಿತ್ತು. ಅದರಲ್ಲಿ ಅವರು ಹೀಗೆ ಹೇಳುತ್ತಾರೆ: "ಶ್ರೀರಾಮಕೃಷ್ಣರ ಶಿಷ್ಯರೆಲ್ಲರೂ ಅವರನ್ನು ಗುರು ಮತ್ತು ಇಷ್ಟದೈವವೆಂದೇ ಭಾವಿಸುತ್ತಿದ್ದರು. ಈ ಸಂಪ್ರದಾಯವನ್ನೇ ಅನುಸರಿಸಿ ಅನಂತರ ಬಂದ ಸಂಘದ ಮುಖ್ಯಸ್ಥರೂ, ತಾವೇ ಗುರುಗಳೆಂದು ಎಂದೂ ಭಾವಿಸಲಿಲ್ಲ. ತಾವು ಕೇವಲ ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಬಳುವಳಿಯನ್ನು ಹೊತ್ತು ಅದನ್ನು ಹಂಚಲು ಶ್ರೀರಾಮಕೃಷ್ಣರಿಂದ ಆಯ್ಕೆ ಮಾಡಲ್ಪಟ್ಟ ಉಪಕರಣವೆಂದೂ ಹಾಗೂ ಅವರು ಸ್ಥಾಪಿಸಿದ ಸಂಘದ ದಾಸರೆಂದೂ ಭಾವಿಸುತ್ತಿದ್ದರು. ಈ ಸಂಪ್ರದಾಯವು ರಾಮಕೃಷ್ಣ ಮಹಾಸಂಘದ ಒಂದು ವೈಶಿಷ್ಟ್ಯ". ಈ ಭಾವನೆ ಭೂತೇಶಾನಂದಜಿಯವರಲ್ಲಿ ಎಷ್ಟು ಆಳವಾಗಿತ್ತು ಎಂದರೆ ಒಮ್ಮೆ ಅವರ ಶಿಷ್ಯರು ತಾವು ಅವರನ್ನು ಪ್ರೀತಿಯಿಂದ ಕಾಣುತ್ತೇವೆಂದು ಹೇಳಿದಾಗ, ತತ್‌ಕ್ಷಣವೇ ಮಹರಾಜರು 'ನನ್ನನ್ನು ಪ್ರೀತಿಸಿದರೆ ನೀವು ಕಷ್ಟಕ್ಕೊಳಗಾಗುವಿರಿ. ನಾನು ಯಾವ ಭಗವಂತನ ನಾಮವನ್ನು ಪುನರುಚ್ಚರಿಸಲು ನಿಮಗೆ ಹೇಳಿರುವೆನೋ, ಆ ಭಗವಂತನನ್ನು ಪ್ರೀತಿಸಿ. ಅಂಥ ಪ್ರೀತಿಯಿಲ್ಲದೆ ಏನನ್ನೂ ಸಾಧಿಸಲಾಗುವುದಿಲ್ಲ" ಎಂದರು. "ಭಗವಂತನ ಸಾಕ್ಷಾತ್ಕಾರವಾದಮೇಲೆ ಏನಾಗುತ್ತದೆ?" ಎಂದು ಒಮ್ಮೆ ಅವರನ್ನು ಕೇಳಿದಾಗ, ಅವರ ಉತ್ತರ ಹೀಗಿತ್ತು: "ಅಂತಹವರು ಎಲ್ಲ ಜೀವಿಗಳನ್ನು ಪ್ರೀತಿಸುವರು. ಆಗ ನಾವು ಶುದ್ಧರಾಗಿ ಮುಕ್ತರಾಗುತ್ತೇವೆ. ನಮ್ಮ ದೌರ್ಬಲ್ಯಗಳೆಲ್ಲಾ ನಾಶವಾಗುತ್ತವೆ. ನಾಮ (ಭಗವಂತನ ಹೆಸರು) ಮತ್ತು ನಾಮಿ (ಭಗವಂತ) ಎರಡೂ ಒಂದೇ ಎಂದು ಅರಿತು ಯಾರು ಗಾಢವಾದ ಜಪದಲ್ಲಿ ತೊಡಗುತ್ತಾರೆಯೋ, ಅವರಿಗೆ ಭಗವತ್ಸಾಕ್ಷಾತ್ಕಾರವಾಗಲೇಬೇಕು. ಶ್ರೀರಾಮಕೃಷ್ಣರೇ ನಮ್ಮ ಗುರು ಮತ್ತು ಅವರೇ ನಮ್ಮ ಇಷ್ಟದೈವ. ಅವರೇ ಸರ್ವಸ್ವ."

ಪೂಜ್ಯರು ಸದಾ ಪ್ರಶಾಂತರಾಗಿರುತ್ತಿದ್ದರು, ಆನಂದದಿಂದ ಇರುತ್ತಿದ್ದರು. ಹಾಸ್ಯಮಯ ಕಥೆಗಳನ್ನು, ಘಟನಾವಳಿಗಳನ್ನು ಹೇಳಿ ತಮ್ಮ ಸುತ್ತಮುತ್ತ ಇದ್ದವರಿಗೆ ಆನಂದ ತುಂಬುತ್ತಿದ್ದರು. ಒಂದು ಘಟನೆ. ಒಂದು ದಿನ ಒಬ್ಬ ಭಕ್ತ ಭೂತೇಶಾನಂದರನ್ನು ಕಾಣಲು ಬಂದ. ಬಂದವನೇ ಭೂತೇಶಾನಂದರ ಕಾಲಿಗೆ ಬಿದ್ದು ಗೊಳೋ ಅಂತ ಅಳತೊಡಗಿದ. ಅವನ ವಿಹ್ವಲತೆಯನ್ನು ನೋಡಿ ಭೂತೇಶಾನಂದರು ಭಾವ ಪರವಶರಾದರು. ಸ್ವಲ್ಪ ಹೊತ್ತಿನ ನಂತರ ಆ ವ್ಯಕ್ತಿಯನ್ನು ಎದ್ದು ಮಾತನಾಡುವಂತೆ ಹೇಳಿದರು. ಅಳುತ್ತಲೇ ಆ ವ್ಯಕ್ತಿ ಹೇಳತೊಡಗಿದ, 'ನಮ್ಮ ಮನೆಯ ಬಾಡಿಗೆದಾರ ಮನೆ ಖಾಲಿ ಮಾಡಲು ಸುತರಾಂ ಒಪ್ಪುತ್ತಿಲ್ಲ!"

**ಭೂತೇಶಾನಂದಜಿ :** ಮಹಾಶಯರೇ, ನಿಮ್ಮ ಬಾಡಿಗೆದಾರ ಮನೆ ಖಾಲಿಮಾಡಲು ನಿರಾಕರಿಸುತ್ತಿದ್ದರೆ ನಾನೇನು ಮಾಡಲು ಸಾಧ್ಯ?

**ವ್ಯಕ್ತಿ :** ನೀವು ಒಂದು ಸಾರಿ "ಅವನು ಮನೆ ಖಾಲಿ ಮಾಡುತ್ತಾನೆ" ಅಂತ ಹೇಳಿದರೆ ಸಾಕು. ಅವನು ಖಂಡಿತಾ ಮನೆ ಬಿಡುತ್ತಾನೆ.

**ಭೂತೇಶಾನಂದಜಿ:** ಓಹ್! ಅವನು ಏಕೆ ಹಾಗೆ ಮಾಡಬೇಕು? ಹೇಳಿ, ನಾನು ಹೇಳುವುದರಿಂದ ಯಾವ ರೀತಿ ವ್ಯತ್ಯಾಸ ವಾಗುತ್ತದೆ?

**ವ್ಯಕ್ತಿ :** ಇಲ್ಲ, ನನಗೆ ವಿವರಿಸಲು ಸಾಧ್ಯ ವಾಗುತ್ತಿಲ್ಲ. ನೀವು "ಅವನು ಮನೆ ಖಾಲಿ ಮಾಡುತ್ತಾನೆ'' ಎಂದು ಹೇಳಿದರೆ ಸಾಕು; ನನಗೆ ಪೂರ್ಣ ನಂಬಿಕೆಯಿದೆ, ಅದು ಸತ್ಯವಾಗಿ ನಡೆದುಹೋಗುತ್ತದೆ. ಅದೇ ನನ್ನ ವಿಶ್ವಾಸ.

ಭೂತೇಶಾನಂದರ ಸಹಾಯಕರು ಆ ಭಕ್ತನನ್ನು ಹೊರಗೆ ಕಳುಹಿಸಲು ಪ್ರಯತ್ನಿಸಿ ಕಡೆಗೂ ಸಫಲರಾದಾಗ, ಭೂತೇಶಾ ನಂದಜಿ ಉದ್ಗರಿಸಿದರು, 'ಹೇಗಿದೆ ನೋಡಿ! ಆ ವ್ಯಕ್ತಿ ಹಾಗೆ ಅಳುತ್ತಿದ್ದಾಗ ನಾನು ನಿಜವಾಗಿ ಭಾವಿಸಿದ್ದೆ, 'ಬಹಳ ದಿನಗಳ ನಂತರ ದೇವರಿಗಾಗಿ ಭಕ್ತಿಪರವಶತೆಯಿಂದ ಅಳುವ ಶಿಷ್ಯನೊಬ್ಬ ನನಗೆ ದೊರಕಿದ್ದಾನೆ' ಎಂದು!''


ಮೈಸೂರಿನಲ್ಲಿ ಪೂಜ್ಯರು

೧೯೯೧ರಲ್ಲಿ ಪೂಜ್ಯರನ್ನು ಬೈಪಾಸ್ ಶಸ್ತ್ರಚಿಕಿತ್ಸೆಗಾಗಿ ಮುಂಬಯಿಗೆ ಕರೆತರಲಾಯಿತು. ಅವರನ್ನು ಶಸ್ತ್ರಚಿಕಿತ್ಸೆಯ ಕೊಠಡಿಯೊಳಗೆ ಕರೆದೊಯ್ಯುವಾಗಲೂ ಅವರಲ್ಲಿ ಯಾವುದೇ ವಿಧವಾದ ಮಾನಸಿಕ ಉದ್ವೇಗವಿರಲಿಲ್ಲ. ಅವರು ಎಂದಿನಂತೆ ಉಲ್ಲಾಸಭರಿತರಾಗಿದ್ದರು. ತಮ್ಮ ಸುತ್ತಮುತ್ತ ಇರುವವರನ್ನು ನೋಡಿ ಹೇಳಿದರು:

'ವೈದ್ಯರು ಹೇಳುತ್ತಾರೆ, ನೀವು ಚೆನ್ನಾಗಿದ್ದೀರಿ ಎಂದು. ನಾನು ದೃಷ್ಟಿ ಮಂದವಾಗಿದೆ ಎಂದು ಹೇಳಿದರೆ ಕನ್ನಡಕವನ್ನು ಉಪಯೋಗಿಸಲು ಹೇಳುತ್ತಾರೆ. ನಾನು ಕಿವಿ ಅಷ್ಟು ಚೆನ್ನಾಗಿ ಕೇಳಿಸುತ್ತಿಲ್ಲ ಅಂದರೆ ಶ್ರವಣಸಾಧನವನ್ನು ಹಾಕಿಕೊಳ್ಳಿ ಎನ್ನು ತ್ತಾರೆ. ನಾನು ಹಲ್ಲುನೋವು ಎಂದರೆ ದಂತವೈದ್ಯರನ್ನು ಕಾಣಿರಿ ಎನ್ನುತ್ತಾರೆ. ನಾನು ಎದೆನೋವು ಎಂದರೆ ಬೈಪಾಸ್ ಶಸ್ತ್ರಚಿಕಿತ್ಸೆ ಮಾಡುತ್ತೇವೆ ಎಂದು ಹೇಳುತ್ತಾರೆ. ಈಗ ನೀವೇ ಹೇಳಿ, ನಾನೆಲ್ಲಿ ಚೆನ್ನಾಗಿದ್ದೇನೆ? ಚೆನ್ನಾಗಿರುವುದಾದರೂ ಹೇಗೆ?''

ಈ ಮಾತುಗಳನ್ನು ಕೇಳಿ ಸೇವಕರೂ, ವೈದ್ಯರೂ ನಗುತ್ತಾ ಪರಿಸ್ಥಿತಿಯ ಒತ್ತಡವನ್ನು ಹಗುರ ಮಾಡಿಕೊಂಡರು. ಸ್ವಾಮಿ ಭೂತೇಶಾನಂದರಿಗೆ ೧೯೯೮ರ ಆಗಸ್ಟ್ ಮೊದಲ ವಾರದಲ್ಲಿ ಭಯಂಕರ ಉದರಶೂಲೆ ಪ್ರಾರಂಭವಾಯಿತು. ಅಂತಹ ಪ್ರತಿಕೂಲ ಪರಿಸ್ಥಿತಿಯಲ್ಲೂ ತಮ್ಮ ಮನೋಸ್ಥೈರ್ಯದಿಂದ ಅವರು ಅದನ್ನು ಸಹಿಸಿಕೊಳ್ಳುತ್ತಿದ್ದರು. ಆದರೆ ಸಂನ್ಯಾಸಿ ಸೋದರರು, ಭಕ್ತಾದಿಗಳು, ಅವರಿಗೆ ಚಿಕಿತ್ಸೆ ನೀಡುತ್ತಿದ್ದ ವೈದ್ಯರ ತಂಡ, ಎಲ್ಲರೂ ತಮ್ಮ ಆರೋಗ್ಯದ ಬಗ್ಗೆ ಬಹಳ ಕಳವಳಗೊಂಡಿದ್ದಾರೆ ಎಂಬ ಅರಿವು ಅವರಿಗಿತ್ತು. ಸಂದರ್ಭವೊದಗಿದಾಗ ಲೆಲ್ಲಾ ಅವರು ತಮ್ಮದೇ ಆದ ಹಾಸ್ಯ ಪ್ರವೃತ್ತಿಯಿಂದ ಅವರ ಮುದುಡಿದ ಮನಸ್ಸನ್ನು ಹಗುರಾಗಿಸಲು ಯತ್ನಿಸು ತ್ತಿದ್ದರು. ಅವರ ಸೇವಕರು ಅವರನ್ನು "ಮಹಾರಾಜ್, ತಮಗೆ ತುಂಬಾ ನೋವಾಗುತ್ತಿದೆಯೇ?'' ಎಂದು ಕೇಳಿ ದಾಗ, ಅವರು "ಹೌದು! ಹೊಟ್ಟೆಯ ಒಳಗೆ ಏನೋ ಒಂದು ಬಲವಾಗಿ ಕಚ್ಚು ತ್ತಿದೆ ಎಂದು ಅನ್ನಿಸುತ್ತಿದೆ.'' ನಂತರ ನಗೆ ಮುಖದಿಂದ ಹೇಳಿದರು, "ಆಶ್ಚರ್ಯ! ಅಲ್ಲಿ ಯಾವ ಹಲ್ಲುಗಳೂ ಇಲ್ಲ. ಆದರೂ ಕಚ್ಚುತ್ತಿರುವ ಅನುಭವವಿದೆ!''

ಒಂದು ಸಂಜೆ ತಮ್ಮ ಕೊಠಡಿಯ ಹೊರಗೆ ಇರುವ ಪಡಸಾಲೆಯಲ್ಲಿ ಪೂಜ್ಯರು ಎಂದಿನಂತೆ ಅಡ್ಡಾಡುತ್ತಿದ್ದರು. ಅವರ ಜೊತೆಯಲ್ಲಿ ಒಬ್ಬ ಸೇವಕರು, ಇಬ್ಬರು ವೈದ್ಯರು, ಕೊಲ್ಕತಾದ ಒಂದು ಶಾಖೆಯಿಂದ ಬಂದಿದ್ದ ಒಬ್ಬ ಸಂನ್ಯಾಸಿ ಸೋದರರೂ ಇದ್ದರು. ಭೂತೇಶಾನಂದರು ಆ ಸಾಧುಗಳ ಕಡೆಗೆ ತಿರುಗಿ ಕೇಳಿದರು, "ನೀನು ನೋಡಿರುವ ವ್ಯಕ್ತಿಗಳಲ್ಲಿ ಅತಿ ವೃದ್ಧರು ಯಾರು?'' ಆ ಸಾಧುಗಳು, 'ನಾನು ೯೭ ವರುಷದ ಸಾಧುವೊಬ್ಬರನ್ನು ನೋಡಿದ್ದೇನೆ—ಅದು ನೀವೇ'' ಎಂದುತ್ತರವಿತ್ತರು. ಭೂತೇಶಾನಂದಜಿ 'ಓಹ್, ನಾನು ಎಷ್ಟು ವೃದ್ಧನಾಗಿದ್ದೇನೆ! ನಿಮಗೆಲ್ಲಾ ತಿಳಿದಿರುವಂತೆ, ನನ್ನ ಪಾಲಿನ ಖಾಯಿಲೆಗಳನ್ನು ನಾನು ಅನುಭವಿಸಿದ್ದೇನೆ. ಕೆಲವು ಅತಿ ದಾರುಣವಾದುವನ್ನೂ ಸಹಾ! ಠಾಕೂರರು ಮೃತ್ಯುವಿನ ದವಡೆಯಿಂದ ನನ್ನನ್ನು ಮೂರು ಸಾರಿ ಸೆಳೆದುಕೊಂಡರು. ಎರಡು ಬಾರಿ ನನ್ನ ಸಂನ್ಯಾಸೀ ಜೀವನದ ಆರಂಭದಲ್ಲಿ. ಇನ್ನೊಂದು ಬಾರಿ ಹೃದಯದ ಶಸ್ತ್ರಚಿಕಿತ್ಸೆಯಾದಾಗ. ನಾನು ಇಷ್ಟು ದೀರ್ಘ ಕಾಲ ಬದುಕಿಯೂ, ಜೀವನದಲ್ಲಿ ನನಗ ಅರುಚಿ ಇಲ್ಲ, ಬೇಸರವಿಲ್ಲ! ಹಾಗೆಯೇ ನನಗೆ ಇನ್ನೂ ಹೆಚ್ಚು ಕಾಲ ಬದುಕಿರಬೇಕೆಂಬ ಆಸೆಯೂ ಇಲ್ಲ. ನಾನು ಬದುಕಿಗೆ ಅಂಟಿಕೊಂಡಿಯೂ ಇಲ್ಲ, ಕಳಚಿಕೊಂಡಿಯೂ ಇಲ್ಲ'' ಎಂದರು. ಇವೆಲ್ಲವನ್ನೂ ಅವರು ಸಹಜವಾಗಿ, ಶಾಂತವಾಗಿ ಹೇಳಿದರು. ಇವೆಲ್ಲವನ್ನೂ ಕೇಳಿಸಿಕೊಂಡವರು, 'ಇದೇ ಅಲ್ಲವೇ ಗೀತೆಯಲ್ಲಿ ಹೇಳಿರುವ ಸ್ಥಿತಪ್ರಜ್ಞನ ಲಕ್ಷಣ' ಎಂದು ಭಾವಿಸಿದರು. ✪